ವಿಷಯ : ಜಿ. ವಿ. ಕೆ. ರಾವ್ ವರದಿ ಬಗ್ಗೆ ಕ್ರಮ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೪೦೧ (೪೪೪)

ಶ್ರೀ ವಾಟಾಳ ನಾಗರಾಜ್ (ಚಾಮರಾಜನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಶ್ರೀ ಜಿ. ವಿ. ಕೆ. ರಾವ್ ರವರು ಕೊಟ್ಟಿರುವ ವರದಿಯನ್ನು ಸರ್ಕಾರ ಪರಿಶೀಲಿಸಿದೆಯೇ ?

ಆ) ಹಾಗಿದ್ದಲ್ಲಿ, ಭ್ರಷ್ಟಾಚಾರ ಅಕ್ರಮಗಳಿಂದ ಕೂಡಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಕೆ. ಹೆಚ್. ಪಾಟೀಲ (ಸಹಕಾರ ಮಂತ್ರಿಗಳು) :

ಅ) ಹೌದು

ಆ) ಸಹಕಾರ ಸಂಘಗಳ ಕಾಯಿದೆ ೧೯೫೯ ಕಲಂ ೬೪ ರ ರೀತಿ ವಿಚಾರಣೆ ಮಾಡಿ ಶ್ರೀ ಜಿ.ವಿ.ಕೆ. ರಾವ್ ಇವರು ಕೊಟ್ಟಿರುವ ವರದಿಯ ಆಧಾರದ ಮೇಲೆ ಕಂಡು ಬಂದ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಸಹಕಾರ ಸಂಘಗಳ ಕಾಯ್ದೆ ೧೯೫೯ಕಲಂ ೬೪ರ ರೀತಿ ಸಹಕಾರ ಸಂಘಗಳ ನಿಬಂಧಕರು ಆದೇಶ ಕೊಟ್ಟಿರುತ್ತಾರೆ.

೨) ದುರುಪಯೋಗ ಗುರುತು ಮಾಡಿರತಕ್ಕಂತಹ ೪ ಪ್ರಕರಣಗಳಲ್ಲಿ ೩ ಕ್ಕೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ. ಇನ್ನು ಒಂದು ಪ್ರಕರಣ ಪರಿಶೀಲನೆಯಲ್ಲಿದೆ.

೩) ೬೯ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಸಹಕಾರ ಸಂಘಗಳ ಕಾಯಿದೆ, ಸಹಕಾರ ಸಂಘಗಳ ನಿಯಮ ಮತ್ತು ಬೈಲಾ ಉಲ್ಲಂಘಿಸಿದ ಬಗ್ಗೆ ನಿರ್ದಿಷ್ಟ ಕ್ರಮ ತೆಗೆದುಕೊಳ್ಳಲು ಸಂಯುಕ್ತ ನಿಬಂಧಕರು ಬೆಂಗಳೂರು ಇವರಿಗೆ ನಿರ್ದೇಶನ ನೀಡಲಾಗಿದೆ

೪) ಸಹಕಾರ ಸಂಘಗಳ ನಿಬಂಧಕರ ಮೂಲಕ ಸಹಕಾರ ಸಂಘಗಳ ಕಾಯಿದೆ ೧೯೫೯ರ ಕಲಂ ೩೦-ಬ ರೀತಿ ಸಂಘಗಳು ಸದಸ್ಯರಿಗೆ ನಿವೇಶನಗಳನ್ನು ಹಂಚ ಬಾರದೆಂದು ನಿರ್ದೇಶನ ನೀಡಲಾಗಿದೆ. ಇದಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿರುತ್ತದೆ.